ಎರಡು ಕೊಳಗಳು, ಇಡೀ ರಾತ್ರಿ ಗುಡುಗು ಸಿಡಿಲಿನ ಹಿನ್ನೆಲೆಯಲ್ಲಿ ಕೇಳುತ್ತಿದ್ದ ಕಪ್ಪೆಗಳ ಸಮೂಹಗಾನ, ಎಲ್ಲವನ್ನೂ ಆತ ನಿನ್ನೆಯಷ್ಟೇ ಬಿಟ್ಟು ಬಂದಂತಿತ್ತು. ಒಂದು ಸಲ ಇಡೀ ರಾತ್ರಿ ಆ ಹಳ್ಳಿಯಲ್ಲಿ ಆತ ಗಸ್ತು ತಿರುಗಲು ಹೋಗಿದ್ದ ಇದೀಗ, ಹಲವಾರು ದೃಶ್ಯಗಳ ಸರಮಾಲೆಯಾಗಿ ಆ ಭೂತಕಾಲ ಧುತ್ತೆಂದು ಆತನೆದುರು ಪ್ರಕಟವಾಯಿತು. ಅವನೀಗ ಮತ್ತೆ ಉಲಾನ್ ಗ್ರಾಮದವನಾಗಿದ್ದ, ಅಲ್ಲಿ ಅವನು ಅದರ ಕಾವಲುಗಾರನಾಗಿ ನಿಂತುಕೊಂಡಿದ್ದ, ಸ್ವಲ್ಪ ದೂರದಲ್ಲಿ ಸಾರ್ವಜನಿಕ ಕಾರ್ಯಾಲಯವಿದೆ. ತೇಲು ಕಂಗಳಿಂದ ಅಲ್ಲಿರುವುದನ್ನೆಲ್ಲ ಆತ ನೋಡುತ್ತಲಿದ್ದ. ಅಲ್ಲಿ ಆ ರಾತ್ರಿಯ ಮೌನದಲ್ಲಿ ಪಿಟೀಲುಗಳ ಹಾಗೂ ದೊಡ್ಡ ತಂತಿ ವಾದ್ಯಗಳ ಮಂದ್ರ ಧ್ವನಿಯಿತ್ತು, ಗರ್ಜನೆಯಿತ್ತು, ಹಾಡು ಇತ್ತು ಹಾಗೂ ಕೂಗಾಟವಿತ್ತು. “ಊಹಾ, ಊಹಾ!” ಈಗ ಊಲಾನದ ಜನರು ಕುದುರೆ ಮೇಲೆ ಕುಳಿತು ಚೂಪಾದ ಬೂಟುಗಳಿಂದ ಬೆಂಕಿಯನ್ನು ಚಿಮ್ಮುತ್ತಿದ್ದರು. ಆದರೆ, ಆ ವೇಳೆ ತನ್ನ ಕುದುರೆ ಏರಿ ಕುಳಿತುಕೊಳ್ಳಲು ಆತನಿಗೆ ಆಯಾಸವೆನಿಸುತ್ತಿತ್ತು. ಹಾಗೇ ಅದೆಷ್ಟೋ ಗಂಟೆಗಳು ಆತನನ್ನು ನಿಧಾನವಾಗಿ ಮುಂದಕ್ಕೆ ಸೆಳೆದೊಯ್ಯುತ್ತಿದ್ದವು. ಕೊನೆಗೆ ದೀಪಗಳು ಆರಿದವು. ಈಗ ಕಣ್ಣು ಹರಿಸಿದಷ್ಟು ದೂರ ಅಪಾರದರ್ಶಕ ನೀರಾವಿ ಮುಸುಕಿಕೊಂಡಿತ್ತು. ಈಗ ಹೊಲಗದ್ದೆಗಳಿಂದ ಮಂಜು ಮೇಲೇಳತೊಡಗಿದೆ. ಬಿಳಿಯ ಮೋಡವಾಗಿ ಅದು ಇಡೀ ಜಗತ್ತನ್ನು ವ್ಯಾಪಿಸಿಕೊಳ್ಳಲಿದೆ. ಅದೊಂದು ಸಮುದ್ರದಂತೆ ನಿಮಗೆ ಕಾಣಿಸಬಹುದು. ಆದರೆ ಅವೆಲ್ಲ ಹೊಲಗದ್ದೆಗಳು. ಇಷ್ಟರಲ್ಲೇ ಈ ಕತ್ತಲೆಯಲ್ಲಿ ಹುಂಡುಗೋಳಿ ಹಕ್ಕಿಗಳ ಧ್ವನಿ ಕೇಳಿ ಬರಲಿದೆ. ಜೌಗು ಹಕ್ಕಿಗಳು ಆ ಹುಲ್ಲುಗದ್ದೆಗಳಿಂದ ಕೂಗಿ ಕರೆಯಲಿವೆ. ನಿಜಕ್ಕೂ, ಪೋಲಂಡ್‌ನ ಈ ರಾತ್ರಿ ಪ್ರಶಾಂತವಾಗಿದೆ ಹಾಗೂ ತಣ್ಣಗಿದೆ. ಸಮುದ್ರದ ಅಲೆಗಳು ಸಳಸಳ ಸದ್ದು ಮಾಡುತ್ತ ಸುರುಳಿ ಸುತ್ತುವ ಹಾಗೆ ದೂರದ ಸೂಚೀಪರ್ಣ ಕಾಡು ಗಾಳಿಯಿಲ್ಲದಿದ್ದರೂ ಕೂಡ ಗುಸುಗುಡುತ್ತಿದೆ. ಇಷ್ಟರಲ್ಲೇ ಮುಂಜಾವು ಪೂರ್ವದಿಸೆಯನ್ನು ಬೆಳ್ಳಗೆ ಬೆಳಗಲಿದೆ. ಬೇಲಿ ಪೊದೆಗಳ ಹಿಂದೆ, ಹುಂಜಗಳು ಕೂಗಲಾರಂಭಿಸಿವೆ. ಒಂದು ಇನ್ನೊಂದಕ್ಕೆ ಉತ್ತರಿಸುವ ಹಾಗೆ ಬಕಪಕ್ಷಿಗಳು ಎಲ್ಲೊ ಎತ್ತರದಲ್ಲಿ ಚೀತ್ಕರಿಸುತ್ತಿವೆ. ಉಲಾನ್ ಉಲ್ಲಸಿತವಾಗಿದೆ ಹಾಗೂ ಪ್ರಕಾಶಮಾನವಾಗಿದೆ. ಯಾರೋ ನಾಳಿನ ಯುದ್ಧದ ಬಗ್ಗೆ ಮಾತಾಡಿದ್ದರು. ಇತರ ಯುದ್ಧಗಳಂತೆ – ಕೂಗಾಟದೊಂದಿಗೆ, ಧ್ವಜಗಳ ಹಾರಾಟದೊಂದಿಗೆ – ಅದು ಸಹ ಮುಂದುವರೆಯಲಿದೆ. ತರುಣನ ಕುದಿವ ರಕ್ತ ಮದ್ದಾನೆಯಂತೆ ಘೀಳಿಡುತ್ತಿದೆ. ಆದರೂ ರಾತ್ರಿ ಅದನ್ನು ತಣ್ಣಗಾಗಿಸುತ್ತದೆ. ಆದರೆ ಇದೀಗ ನಸುಕು ಹರಿಯುತ್ತಿದೆ. ಆಗಲೇ ರಾತ್ರಿ ತೆಳುವಾಗತೊಡಗಿದೆ. ನೆರಳುಗಳೊಳಗಿಂದ ಕಾಡುಗಳು, ಗಿಡಗಂಟಿಗಳ ಪೊದೆಗಳು, ಗುಡಿಸಲುಗಳ ಸಾಲು, ಕಾರ್ಖಾನೆ, ಪಾಪ್ಲರ್ ಮರಗಳು ಮೇಲೆದ್ದು ಬರುತ್ತಿವೆ. ಶಿಖರದ ಮೇಲಿನ ಲೋಹದ ಬ್ಯಾನರ್‌ಗಳಂತೆ ಅಲ್ಲಿರುವ ಬಾವಿ ಕಿರಿಚುತ್ತಿದೆ. ಎಂಥ ಒಲವಿನ ನೆಲವಿದು! ಮುಂಜಾನೆಯ ಗುಲಾಬಿಯ ಚೆಂಬೆಳಕಿನಲ್ಲಿ ಚೆಲುವೇ ಮೈವೆತ್ತಂತಿದೆ! ಓಹ್, ಒಂದು ದೇಶ, ಒಂದೇ ಒಂದು ದೇಶ! ಶಾಂತವಾಗು ಮನಸೆ! ಅಲ್ಲಿ ಯಾರೋ ಬರುತ್ತಿರುವುದನ್ನು ಜಾಗೃತ ಕಾವಲು ಪಡೆಯವರು ಆಲಿಸುವಂತಿದೆ. ನಿಸ್ಸಂದೇಹವಾಗಿ, ಅವರು ಈ ಕಾವಲು ಪಡೆಯನ್ನು ರಾತ್ರಿ ಪಾಳೆಯಿಂದ ಬಿಡುಗಡೆಗೊಳಿಸಲು ಬರುತ್ತಿದ್ದಾರೆ. ಒಮ್ಮಿಂದೊಮ್ಮೆಲೆ, ಮಲಗಿದ್ದ ಸ್ಕಾವಿನ್‌ಸ್ಕಿ ಬಳಿ ಯಾರದೋ ದನಿ ಕೇಳಿ ಬಂತು–“ಇದೋ ಇಲ್ಲಿದ್ದಾನೆ ಈ ವೃದ್ಧ! ಎದ್ದೇಳು! ಹೀಗೇಕೆ ಮಲಗಿರುವೆ? ಏನು ಸಮಾಚಾರ?”

ಆ ವೃದ್ಧ ಕಣ್ಣು ತೆರೆದು, ತನ್ನೆದುರು ನಿಂತಿದ್ದ ವ್ಯಕ್ತಿಯನ್ನು ಆಶ್ಚರ್ಯಚಕಿತನಾಗಿ